ಮಾರುತಿಸೇವಾನಗರವು ಹೆಣ್ಣೂರು–ಬಾಣಸವಾಡಿ ಲೇಔಟ ಒದನೇ ಬ್ಲಾಕಿಗೆ ಹೊಂದಿಕೊಂಡಿದೆ. ಈ ಮಾರ್ಗದಲ್ಲಿ ಬಾಣಸವಾಡಿ ಮತ್ತು ಮಾರುತಿಸೇವಾನಗರ ನಡುವೆ ಎರಡು ಬಸ್ ನಿಲುಗಡೆಗಳನ್ನು ಆರ್ಧ ಕಿ.ಮೀ. ಗೂ ಕಡಿಮೆ ಅಂತರದಲ್ಲಿ 1 ನೇ ಬ್ಲಾಕಿನ ನಿವಾಸಿಗಳಿಗೆ ಅನುಕೂಲವಾಗುವಂತೆ ಒದಗಿಸಲಾಗಿದೆ. ಆದುದರಿಂದ ಸದರೀ ಲೇಔಟ್‌ನ ಈಗಿನ ನಿವಾಸಿಗಳು ತೊಂದರೆ ಇಲ್ಲದೇ ಬಾಣಸವಾಡಿ, ಕಲ್ಕರೆ ಮತ್ತು ರಾಮಮೂರ್ತಿನಗರಗಳಿಂದ ಮುಖ್ಯ ಬಸ್ ನಿಲ್ದಾಣಗಳಿಂದ ನಗರ ಮಾರುಕಟ್ಟೆ, ಶಿವಾಜಿನಗರ ಮತ್ತು ಸುಭಾಷ್‌ನಗರ ನಿಲ್ದಾಣಗಳಿಗೆ ಸಂಚರಿಸಬಹುದು.

ಆದಾಗ್ಯೂ ಬೆಂಗಳೂರು ನಗರ ಸಾರಿಗೆ ವಿಭಾಗವು ಹೆಣ್ಣೂರು–ಬಾಣಸವಾಡಿ ಲೇಔಟ್ ಪೂರ್ಣ ಅಭಿವೃದ್ಧಿಯಾದ ನಂತರ ಆಲ್ಲಿಂದ ನಗರ ಮಾರುಕಟ್ಟೆ ಮತ್ತು ಶಿವಾಜಿನಗರ ಬಸ್ ನಿಲ್ದಾಣಗಳಿಗೆ ಸಾರಿಗೆ ಸೌಕರ್ಯ ಒದಗಿಸುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

ಬೆಂಗಳೂರು – ಮೈಸೂರು ರಸ್ತೆಯ ವಿಸ್ತರಣೆ.

ಶ್ರೀ ಎಂ.ಎಸ್. ಆತ್ಮಾನಂದ :– ಮಾನ್ಯ ಅಧ್ಯಕ್ಷರೆ, ಬೆಂಗಳೂರು – ಮೈಸೂರು ರಸ್ತೆ ಅತಿ ಪ್ರಾಮುಖ್ಯವಾದ ಹೆದ್ದಾರಿಯಾಗಿದ್ದು, ಈ ರಸ್ತೆಯಲ್ಲಿ ವಾಹನ ಸಂಚಾರ ದಟ್ಟವಾಗಿದ್ದು, ದಿನೇದಿನೇ ವಾಹನಗಳ ಸಂಖ್ಯೆ ಹೆಚ್ಚಾಗುತ್ತಾ ಇದೆ. ಸದರಿ ರಸ್ತೆಯು ಹಾಲಿ ಇರುವ ಸ್ಥಿತಿಯಲ್ಲಿ ವಾಹನ ಸಂಚಾರದ ಒತ್ತಡವನ್ನು ನಿರ್ವಹಿಸಲು ಸಮರ್ಥನೀಯ ಸ್ಥಿತಿಯಲ್ಲಿರುವುದಿಲ್ಲ. ಅನೇಕ ಅಪಘಾತಗಳು ದಿನನಿತ್ಯ ಸಂಭವಿಸುತ್ತಾ ಇದೆ. ಈ ರಸ್ತೆಯಲ್ಲಿ ವಾಹನ ಸಂಚಾರವನು ಸುಗುಮಗೊಳಿಸಲು, ರಸ್ತೆಯ ವಿಸ್ತರಣೆ ಅತಿ ಅವಶ್ಯವು ಹಾಗೂ ಜರೂರಾಗಿದೆ. ಈ ಬಗ್ಗೆ ಶೀಘ್ರ ಕಮ; ಕೈಗೊಳ್ಳಬೇಕೆಂದು ಮುಖ್ಯಮಂತ್ರಿಗಳನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ:– ಮಾನ್ಯ ಅಧಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆ ಓದಬಯಸುತ್ತೇನೆ.

ಬೆಂಗಳೂರು–ಮೈಸೂರು ರಸ್ತೆಯು 139 ಕಿ.ಮೀ. ಉದ್ದವಿದೆ. ಇದು ಈ ರಾಜ್ಯದ ಒಂದು ಮುಖ್ಯ ಹೆದ್ದಾರಿಯಾಗಿರುತ್ತದೆ. ಈ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆಯು ಅತೀ ತೀವ್ರವಗಿದೆ. ಈ ರಸ್ತೆಯನ್ನು ಅಭಿವೃದ್ಧಿಪಡಿಸಿ ಸುಸ್ಥಿತಿಯಲ್ಲಿಡಲು ರಾಜ್ಯ ಸರ್ಕಾರವು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದೆ. 1990–91ನೇ ಸಾಲಿಗೆ ಈರಸ್ತೆಯಲ್ಲಿ ಬರುವ ಅಪಾಯಕಾರಿಯಾದ ತಿರುವುಗಳನ್ನು ನೇರ ಮಾಡುವುದು, ಅತ್ಯಂತ ತೀವ್ರ ವಾಹನ ಸಂಚಾರ ದಟ್ಟಣೆ ಇರುವ ಕಡೆ ರಸ್ತೆಯನ್ನು ಅಗಲಗೊಳಿಸುವುದು, ಮುಂತಾದ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಹಾಗೂ ಈ ಸಾಲಿನಲ್ಲಿ ಈ ರಸ್ತೆಗೆ 50.00 ಲಕ್ಷ ರೂ. ಗಳನ್ನು ನಿಗಧಿಪಡಿಸಲಾಗಿದೆ. ಇದೂ ಅಲ್ಲದೇ, ಈ ರಸ್ತೆಯ ಅಭಿವೃದ್ಧಿಯನ್ನು ಓ.ಇ.ಸಿ.ಎಫ್. (ಜಪಾನ್ ದೇಶದ ಸಹಾಯ ಯೋಜನೆ) ಅಡಿಯಲ್ಲಿ ಅಭಿವೃದ್ಧಿಪಡಿಸಲು ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ.

ಬೆಂಗಳೂರು–ಮೈಸೂರು – ಹುಣಸೂರು–ವಿರಾಜಪೇಟೆ ಮೂಲಕ ಕೇರಳ ರಾಜ್ಯದಲ್ಲಿರುವ ತಲ್ಲಿಚೇರಿಗೆ ಇರುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಈ ರಸ್ತೆಯ ಪ್ರಾಮುಖ್ಯತೆಯನ್ನು ಮನಗಂಡ ರಸ್ತೆಯ ಅಭಿವೃದ್ಧಿ ಹಾಗೂ ನಿರ್ವಹಣೆಯನ್ನು ಮಾಡಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗಿದೆ.

7. ಬೆಳಗಾವಿ ಜಿಲ್ಲೆಯ ಹುಕ್ಕೇರಿ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವುದು.